
ಹೆಸರು ಹಾಕಿಕೊಂಡದ್ದಕ್ಕೆ ಪುರಾವೆ ಆದರೂ ಸಿಗುತ್ತೆ. ನಾನು ಇನ್ನೂ ನೋಡಿಲ್ಲ' ಅಂದರು. 'ಇಲ್ಲಾ ಬುಡಿ ಸಾರ್. ನಂಗೆಲ್ಲಾ ಗೊತ್ತು, ನಮ್ಮ ಕ್ಲಾಸ್ ರಾಘು ಎಲ್ಲಾ ಹೇಳ್ಯಾನ' ಎಂದು ಗೊಳಗೊಳನೆ ಅಳುತ್ತಾ ಊರಿನ ನ್ಯಾಯದಾತ ಜೆರಾಕ್ಸ್ ಅಂಗಡಿ ಜಂಬಣ್ಣನ ಮನೆ ಕಡೆ ಹೊಂಟ.

ಮೇಷ್ಟ್ರು ಮಾಡಿದ ಅನ್ಯಾಯವನ್ನ ಹೇಳಿಕೊಳ್ಳಾಕ ಜಂಬಣ್ಣ ಒಬ್ಬನೇ ಸರಿಯಾದ ವ್ಯಕ್ತಿಯಾಗಿದ್ದ. ಮೇನ್ ರೋಡಿಗೆ ಇರೋ ಅವನ ಅಂಗಡಿ ತೆರೆದಿರಲಿಲ್ಲ. ಮನೆ ಮೂಲೆ ತಿರುವಿದ. ಜನ ತುಂಬಿ ತುಳುಕುತ್ತಿತ್ತು. ಜಂಬಣ್ಣ ನಾಕು ಮಂದಿಗೆ ಬೇಕಾದ ಮನುಷ್ಯ ಬಂದರೂ ಬಂದಿರಬಹುದು. ಆದರೆ ಇಷ್ಟೊಂದು ಜನ! ಪುಲಿಗೆ ಗಾಬರಿಯಾಯಿತು. ಮನೆ ಹತ್ತಿರ ಬಂದ. ಜನರನ್ನ ನೂಕಿಕೊಂಡು ಒಳಾಕ ಹೋದ. ಜಂಬಣ್ಣ ಪಡಸಾಲಿ ಕಟ್ಟೆ ಮೇಲೆ ಹೆಣವಾಗಿ ಬಿದ್ದಿದ್ದ. ಪುಲಿ ಏಕ್‌ದಂ ಪಿಲ್ಲಿಯಾದ. ಏನಾಯ್ತು? ಯಾವಾಗಾಯ್ತು? ಯಾರನ್ನು ಕೇಳಬೇಕೋ ಗೊತ್ತಾಗಲಿಲ್ಲ. ಹೊರಗೆ ಕೊಲ್ಡಿನ ಮ್ಯಾಲೆ ಕುಂತ ಮಂದಿ ಮಾತನಾಡುವಲ್ಲಿಗೆ ಹೋಗಿ ಸುಮ್ಮನೆ ನಿಂತ. 'ಅಲ್ಲಾ ಈ ಜಂಬಣ್ಣ ಒಳ್ಳೇನು ಆಗಿರಬಹುದು, ಹಂಗಂಥ ನಮ್ಮ ಊರ ಸಾವ್ಕಾರನ ಮ್ಯಾಲೆ ಅಪವಾದ ಹೊರಿಸಿದರೆ ದೇವ್ರು ಸುಮ್ಕಿರತಾನ'. ಜನರ ಮಾತು ಕೇಳಿ ಪುಲಿ ನಿಚ್ಚಳವಾದ. 'ಏನ್ ಏನ್ ನೀವು ಹೇಳಿದ್ದು?' ಗಾಬರಿಯಲ್ಲಿ ಕೇಳಿದ. 'ಏ ತಮ್ಮಾ, ಕೇಳು, ನೀನೂ ಕಥೆ ಬರಿತೀನಿ ಅಂತಿದ್ದೆ. ಇಂಥಾ ಕಥೆ ಬರೆದೆಯಾ ಹೆಂಗೆ?' – ಕಟಂಬಲಿ ರಾಮಪ್ಪ ತಾತ ಕೇಳಿ, 'ಆ ಜಂಬಣ್ಣ ನಮ್ಮ ಸಾವ್ಕಾರ ಕಳ್ಳ ಉಸುಗು ಸಾಗಿಸುತ್ತಾನಂತೆ. ಆ ಉಸುಗೇ ನಮ್ಮ ಊರನ್ನ ಕಾಪಾಡಿದೆಯಂತೆ, ಅದಿಲ್ಲದಿದ್ದರೆ ನಮ್ಮ ಊರೇ ಮುಣಗಿ ಹೋಗುತ್ತಂತೆ. ಹಿಂಗೆ ಏನೇನೋ ಬರೆದು ಬಹುಮಾನ ತಗಂಡ. ನೋಡು ಈಗ ರಕ್ತ ಕಾರಿಕೊಂಡು ಸತ್ತ' ಎಂದ.

ಪುಲಿ ಕಾಲುಗಳು ಗಡ ಗಡ ನಡುಗಿದವು. ಕಟ್ಟೆ ಮೇಲೆ ಬಿದ್ದಿದ್ದ ಪೇಪರ್ ನೋಡಿದ. ಬಹುಮಾನಿತ ಕಥೆ: 'ಉಸುಗು ಕಳ್ಳನ ಹೂಸು' – ಲೇಖಕ: ಮಜ್ಜಿಗೆ ಜಂಬಣ್ಣ ಎಂದು ಬರೆದಿತ್ತು. ಹೌದು ಇದು ನನ್ನದೇ ಕಥೆ. ನಾನು ಬರೆದ 'ಉಸುಗು ಕಳ್ಳನ ಕಥೆ'ಯನ್ನ ಜಂಬಣ್ಣ ಬದಲಿಸಿ ತನ್ನ ಹೆಸರು ಹಾಕ್ಕೊಂಡಿದ್ದ. ಆ ಕಥೆಗೋಸ್ಕರವೇ ಕೊಲೆ..! ಅಲ್ಲಲ್ಲಾ ದೇವ್ರ ಶಾಪ! ಪುಲಿಯ ಕಾಲುಗಳು ಶಕ್ತಿ ಕಳಕೊಂಡವು. ಅಲ್ಲೇ ಕುಸಿದು ಬಿದ್ದ. ಜನರೆಲ್ಲಾ ಸೇರಿ ಎಬ್ಬಿಸಿದರು. ಎದ್ದವನೇ ಸಾವ್ಕಾರನ ಮನೆ ಕಡೆ ತಿರುಗಿ ನೋಡಿದ. ಸಾವ್ಕಾರ ಮೀಸೆ ಮೇಲೆ ಕೈಯಾಡಿಸಿಕೊಳ್ಳುತಾ ದೇವರು ಕುಂತಂಗ ಕುಂತಿದ್ದ. ಈ ಕಥೆ ಬ್ಯಾಡ, ರೊಕ್ಕ ಬ್ಯಾಡಲೇ ಯಪ್ಪಾ ಎಂದು ಅಡ್ಡಲಾ ಬಡ್ಡಲಾ ಓಡಿದ.



ದಾರಿಯಲ್ಲಿ ತನ್ನ ಕಥೆ, ಬಹುಮಾನ, ಪಾಯಿಖಾನೆ ಹೀಗೆ ಏನೇನೋ ಯೋಚನೆ ಮಾಡಿಕೋಂತ ಮನೆ ಸೇರೋದರೊಳಗೆ ಮನೆ ಮುಂದೆ ಪೋಲೀಸ್ ಜೀಪ್ ಬಂದು ನಿಂತುಕೊಳ್ತು. ಪುಲಿಗೆ ಮತ್ತೆ ಗಾಬರಿಯಾಯಿತು. ಕಥೆ ಬರೆದದ್ದೇನೋ ನಾನು. ಆದರೆ ಜಂಬಣ್ಣನ ಸಾವಿಗೂ ನನಗೂ ಸಂಬಂಧವೇ ಇಲ್ಲ ಅಂಥ ಪೋಲೀಸರ ಕಾಲಿಗೆ ಬಿದ್ದು ಕೇಳಿಕೊಳ್ಳಾಣವೆಂದು ಎದ್ದ. ಅವರ ಹಿಂದೆ ಇನ್ನೊಂದು ವ್ಯಾನ್ ಬಂತು. ಅದು ಪೋಲೀಸರ ವ್ಯಾನ್ ಅಂತೂ ಆಗಿರಲಿಲ್ಲ. ವ್ಯಾನ್ ಮೇಲೆ ಗಾಂಧಿ ತಾತನ ಕಣ್ಣು ಕಳಾಸ್ರ ಕಂಡವು. ಅಷ್ಟೊತ್ತಿಗೆ ಪಿ.ಎಸ್.ಐ. ಶಾಂತಪ್ಪ ಸಾರ್ ಜೀಪಿನಿಂದ ಇಳಿದು, 'ಮೊನ್ನೆ ಜಾತ್ರಿಗೆ ಬಂದೋಬಸ್ತಿಗೆ ಊರಿಗೆ ಬಂದೋರು ಪಾಯಿಖಾನೆ ಇಲ್ಲದ್ದು ನೋಡಿ, ಮೊಬೈಲ್ ಟಾಯ್ಲೆಟ್ ತರಿಸಿದ್ದರು. ನೋಡಿ ನಮ್ಮ ದೇಶ ಅಭಿವೃದ್ಧಿ ಆಗಬೇಕು ಅಂದರೆ ಸ್ವಚ್ಛತೆಯಿಂದಲೇ ಶುರು ಆಗಬೇಕು. ಅದಾಗುತ್ತಿಲ್ಲ. ಹಾಗಾಗಿ ನನ್ನ ಕೈಲಾದಷ್ಟು ನಾನು ಮಾಡ್ತೀನಿ. ಈ ವ್ಯಾನ್ ಪ್ರತಿದಿನ ಬೆಳಿಗ್ಗೆ, ಸಂಜೆ ನಿಮ್ಮ ಏರಿಯಾಗೆ ಬರುತ್ತೆ. ನೀವು ಇದರ ಸದುಪಯೋಗ ಪಡಿಸಿಕೊಳ್ಳಿ. ನಾನಿನ್ನು ಬರುತ್ತೇನೆ' ಎಂದು ಹೇಳಿ ಹೋದರು. ಅವರ ಮಾತು ಕೇಳಿ ಪುಲಿಗೆ ಹೋದ ಜೀವ ಬಂದಂಗಾತು.

ಜೀಪಿನ ಆ ದೂಳಿನಲ್ಲಿ ಮತ್ತೊಂದು ಹೊಸ ಕಥೆ ಕಂಡಂಗಾತು. ಖಾಲಿ ಪೇಪರ್ ಚೀಲ ಮತ್ತೆ ಹೆಗಲೇರಿತು. ಆದರೆ ಈ ಸಾರಿ ಸಾವರ ಕೋಟಿ ಕಟ್ಟಿದೋರ, ಕೆಡವಿದೋರ ಕಥೆ ಹೇಳಿದರೂ ಜಾಡು ಸಿಗದ ದುರಗಮ್ಮವ್ವನ ಹೆಜ್ಜೆ ತುಳಿಬೇಕಾಗಿದೆ ಎಂದು ನಿಧಾನವಾಗಿ ನಡೆದ.

●